ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪಾಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕ ಪರ್ಯಾಲೋಚನೆ ಪ್ರಸ್ತಾವ

ಅಧ್ಯಕ್ಷರು.—ಜಾಲಪ್ಪನವರೇ ತಾವು ಮಂಡಿಸಿ.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—''ಮಾನ್ಯ ಅಧ್ಯಕ್ಷರೇ, ೧೯೮೭ನೇ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.''

ಶ್ರೀ ಆರ್.ಎಲ್. ಜಾಲಪ್ಪ.—ಅಧ್ಯಕ್ಷರೆ, ಇದನ್ನು ಈಗಾಗಲೇ ಆರ್ಡಿನೆನ್ಸ್ ಮೇಲೆ ತಂದಿದ್ದೇನೆ. ಬಹಳ ಮುಖ್ಯವಾಗಿ ಎರಡು ಕಲಂಗಳನ್ನು ಇದರಲ್ಲಿ ನಾವು ಬದಲಾಯಿಸಿದ್ದೇವೆ. ಇದರಲ್ಲಿ ಈಗ ಹಿಂದಿನಿಂದಲೂ ಈ ಲೇವಾದೇವಿಗಾರರು ಮಾಡುತ್ತಿದ್ದ ಮತ್ತು ಸರ್ಕಾರದ ಸಂಸ್ಥೆಗಳು, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗಳು ಬೇರೆ ಬೇರೆ ಸಂಸ್ಥೆಗಳಿಗೆ ಇದರಿಂದ ವಿನಾಯಿತಿ ಕೊಡಬೇಕಾದರೆ ಆಕ್ಟ್ ಅಮೆಂಡ್‌ಮೆಂಟ್ ಮಾಡಬೇಕಿತ್ತು. ಆದರಿಂದ ಬೇರೆ ಇಂಥ ಸಂಸ್ಥೆಗಳಿಗೆ ವಿನಾಯಿತಿ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇರಬೇಕು. ಅದನ್ನು ನಾವು ಈ ಆಕ್ಟಿನಲ್ಲಿ ತಂದಿದ್ದೇವೆ. ಎರಡನೆಯದಾಗಿ ಈ ಕಲಂ ೨೦ ಮತ್ತು ೨೧ ಇದರ ಪ್ರಕಾರ ಲೇವಾದೇವಿಗಾರರಿಗೆ ಹಿಂದಿ, ಗುಜರಾತಿ, ಮರಾಠಿ ಭಾಷೆಯಲ್ಲಿ ತಮ್ಮ ಲೆಕ್ಕಗಳನ್ನು ಇಡುತ್ತಿದ್ದರು. ಇದರಿಂದ ಲೇವಾದೇವಿಗಾರರಿಗೆ ಅವರಿಗೆ ಭಾಷೆಯ ಜ್ಞಾನವಿಲ್ಲದೆ ಗೊತ್ತಾಗುತ್ತಿರಲಿಲ್ಲ. ಇನ್ನು ಮೇಲೆ ಇದಕ್ಕೆ ಬದಲಾಗಿ ಅವರು ಕನ್ನಡ ಅಥವಾ ಇಂಗ್ಲೀಷ್ ಎರಡರಲ್ಲಿಯೇ ಲೆಕ್ಕಗಳನ್ನು ಬರೆಯಬೇಕು ಎಂದು ನಾವು ಒಂದನ್ನು ಸೂಚಿಸಿದ್ದೇವೆ. ದಯವಿಟ್ಟು ಸಭೆಯು ಇದನ್ನು ಅನುಮೋದಿಸಬೇಕೆಂದು ಪ್ರಾರ್ಥನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ರ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೫ ರವರೆಗೆ

ಅಧ್ಯಕ್ಷರು.—''ಖಂಡ ೨ ರಿಂದ ೫ ರವರೆಗೆ ಎಲ್ಲೂ ತಿದ್ದುಪಡಿ ಇರುವಂತೆ ಈ ವಿಧೇಯಕವು ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ ರವರೆಗೆ ಎಲ್ಲೂ ತಿದ್ದುಪಡಿ ಇರುವಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪೀಠಿಕೆ ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ವಿಧೇಯಕವನ್ನು ಅನುಸೂಚಿಸುವ ಸೂತ್ರ ಸಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—೧೯೮೭ರ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ರ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಇಸವಿಯ ನೋಂದಣಿ(ಕರ್ನಾಟಕ)ತಿದ್ದುಪಡಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

(೬೪) ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಯೋಜನೆ, ಮತ್ತು ಕಾರ್ಮಿಕ ಮಂತ್ರಿಯವರ ಪರವಾಗಿ ನಾನು ೧೯೮೭ನೇ ಇಸವಿಯ ನೋಂದಣಿ(ಕರ್ನಾಟಕ ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಇರತಕ್ಕಂಥ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ನಮಗೆ ಸ್ವಲ್ಪ ತೊಂದರೆ ಬಂದಿದೆ. ಈಗ ಇರತಕ್ಕ ಸಬ್ ಸೆಕ್ಷನ್ ೨ ಆಫ್ ಸೆಕ್ಷನ್ ೫೦ ನಲ್ಲಿ ಏನು ಇದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ:

> '' The Rigistratran of a district in which the presidency Town is included and the Registrar of the Delhi District may receive and Rigister any document referred to in Section 28 without regard to the situation in any part of India of the property to which the document relates ''

ಈಗಿನ ತಿದ್ದುಪಡಿ ಪ್ರಕಾರ ಏನು ಇದೆ ಎಂದರೆ ಒಂದು ಸ್ಥಿರ ಆಸ್ತಿಯನ್ನು ಪರಭಾರೆ ಮಾಡತಕ್ಕಂಥ ಸಂದರ್ಭದಲ್ಲಿ ಆ ಸ್ಥಿರ ಆಸ್ತಿ ಯಾವ ಸಬ್ ರಿಜಿಸ್ಟ್ರಾರ್ ಅಧಿಕಾರೀ ವ್ಯಾಪ್ತಿಯಲ್ಲಿ ಬರುತ್ತದೊ ಅಲ್ಲಿ ತಮ್ಮ ಕಾಗದ ಪತ್ರಗಳನ್ನು ತಂದು ರಿಜಿಸ್ಟ್ರೇಷನ್ ಮಾಡಿಸಬೇಕು ಅನ್ನುವುದು ಇದೆ. ಈ ಹಿಂದಿನ ಆಕ್ಟ್‌ನ ಸಬ್ ಸೆಕ್ಷನ್ ೨ ಆಫ್ ಸೆಕ್ಷನ್ ೫೦ ಪ್ರಕಾರ ಪ್ರೆಸಿಡೆನಿಸ್ ಟಾನ್ಸ್ ಮತ್ತು ಡೆಲ್ಲಿ ಡಿಸ್ಟ್ರಿಕ್ಟ್‌ನ ಈ ೪ ಕಡೆಗಳಲ್ಲಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದೇಶದಲ್ಲಿ ಯಾವ ಭಾಗದಲ್ಲಿ ಸ್ಥಿರ ಆಸ್ತಿ ಇದ್ದರೂ ಸಹ ಯಾವ ಭಾಗದಲ್ಲಾದರೂ ಹೋಗಿ ರಿಜಿಸ್ಟ್ರೇಷನ್ ಮಾಡಿಸಬಹುದು. ಬೆಂಗಳೂರು ಮತ್ತು ಬೇರೆ ಬೇರೆ ಕಡೆಯಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ತಮ್ಮ ಆಸ್ತಿಯನ್ನು ಪರಭಾರೆ ಮಾಡತಕ್ಕಂಥಾ ವಿಚಾರದಲ್ಲಿ ಜನರು ಅಲ್ಲಿಗೆ ರಿಜಿಸ್ಟ್ರೇಷನ್ ಮಾಡಿಸುವುದಕ್ಕೆ ಏನು ಹೋಗುತ್ತಾರೋ ಅದನ್ನು ತಪ್ಪಿಸುವುದಕ್ಕೆ ಇದನ್ನು ತಂದಿದ್ದೇವೆ. ತಮ್ಮ ಗಮನಕ್ಕೆ ತರಬೇಕಾದರೆ ಕೆಲವರು ಮುಂಬೈಗೆ ಹೋಗಿ ರಿಜಿಸ್ಟ್ರೇಷನ್ ಮಾಡಿಸುತ್ತಾರೆ, ಕೆಲವರು ಮದ್ರಾಸ್‌ಗೆ ಹೋಗಿ ಮಾಡಿಸುತ್ತಾರೆ. ಈ ಆಕ್ಟ್ ಪ್ರಕಾರ ಅಲ್ಲೆಲ್ಲಾ ಹೋಗಿ ರಿಜಿಸ್ಟ್ರೇಷನ್ ಮಾಡಿಸುವುದು ತಪ್ಪುತ್ತದೆ. ಇದನ್ನು ನಿಯಂತ್ರಣ ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದಲೂ ಮತ್ತು ಇದರಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಹಣ ಬೇರೆ ಕಡೆ ಹೋಗಲು ತಪ್ಪಿಸುವ ದೃಷ್ಟಿಯಿಂದಲೂ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಆದರೆ ಈ ತಿದ್ದುಪಡಿ ಜಾರಿಗೆ ಬರಬೇಕಾದರೆ ಕೇಂದ್ರ ಸರ್ಕಾರದವರ ಅಪ್ಪಣೆ ಬೇಕು. ಅವರಿಂದ ಅಪ್ಪಣೆ ಬಂದಮೇಲೆ ಈಗ ಮಾಡತಕ್ಕಂಥ ರೀತಿ ತಪ್ಪಿ ಹೋಗುತ್ತದೆ. ಈ ರೀತಿಯಾಗಿ ಆಂಧ್ರದಲ್ಲಿ ೧೯೮೬ ನೇ ಇಸವಿಯಲ್ಲೇ ಮಾಡಿದ್ದಾರೆ, ಏತಕ್ಕೊ ಏನೋ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಮೊದಲು ನೋಡಲಿಲ್ಲ. ಇದು ಸರ್ವ ಸಾಮಾನ್ಯವಾಗಿ ಎಲ್ಲರೂ ಒಪ್ಪತಕ್ಕಂಥ ವಿಚಾರ ಮತ್ತು ಇದು ಎಲ್ಲರಿಗೂ ಅನುಕೂಲಕರವಾಗಿರತಕ್ಕಂಥ ವಿಚಾರವಾದುದರಿಂದ ಈ ತಿದ್ದುಪಡಿಯನ್ನು ಮಾನ್ಯ ಸಭೆ ಒಪ್ಪಬೇಕೆಂದು ನಾನು ಕೇಳಿಕೊಳ್ಳುತ್ತೇನೆ.